**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 93/2020**

**ಚಾ.ಸಾಃ2, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ಸೀತಾರಾಮ ಭಂಡಾರಿ |
| ತಾಯಿ ಹೆಸರು | ನಾರಾಯಣ ಭಂಡಾರಿ |
| ವಯಸ್ಸು | 72 ವರ್ಷಗಳು |
| ಉದ್ಯೋಗ | ನಿವೃತ್ತ ಪಂಚಾಯತಿ ಕಾರ್ಯದರ್ಶಿ, ಮಂಕಿ ಗ್ರಾಮ ಪಂಚಾಯತಿ |
| ವಾಸ್ತವ್ಯ | ಜಡ್ಡಿಗದ್ದೆ, ತಾಲೂಕಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 29-07-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದ ನಿಪಿ-2 ಗುನ್ನೆ ಜಾಗೆ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ಗುರುತಿಸಿದ್ದರಿಂದ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 18-07-2020 ರಂದು ಜಡ್ಡಿಗದ್ದೆಯಲ್ಲಿರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದ್ದಕ್ಕೆ ಸಂಬಂಧಿಸಿದಂತೆ ಮಾಡಿರುತ್ತೇನೆ. ಸ್ಥಳಕ್ಕೆ ಪಿಎಸ್ಐ ಮತ್ತು ಇಬ್ಬರು ಪೋಲಿಸರು ಬಂದಿದ್ದರು. ಸ್ಥಳವನ್ನು ಚಾಸಾ-1 ತೋರಿಸಿದರು. ನನ್ನ ಜೊತೆ ಚಾಸಾ-3 ತಿಮ್ಮು ಗೌಡ ಸಹ ಇದ್ದರು. ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಬರೆದುಕೊಂಡು ನನ್ನ ಸಹಿ ಪಡೆದಿರುತ್ತಾರೆ. ಸ್ಥಳದಲ್ಲಿ ಛಾಯಾಚಿತ್ರ ತೆಗೆಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-3 ಮತ್ತು 4 ರಲ್ಲಿ ತನ್ನ ಇರುವಿಕೆಯನ್ನು ಒಪ್ಪಿಕೊಂಡು ಛಾಯಾಚಿತ್ರಗಳನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ್ ಎಂ. ಭಂಡಾರಿಯವರಿಂದಃ**

ಪಂಚನಾಮೆ ಸಂದರ್ಭದಲ್ಲಿ ಸ್ಥಳದಲ್ಲಿ ಸುಮಾರು 10-20 ಜನ ಸೇರಿದ್ದರು. ನಿಪಿ-2 ನ್ನು ಬರೆಯಲು ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ವಸ್ತುಗಳು ಕಳ್ಳತನವಾಗಿದ್ದ ಕಪಾಟು ಸದರಿ ಕಟ್ಟಡದ ಪಶ್ಚಿಮ ದಿಕ್ಕಿನಲ್ಲಿ ಇತ್ತು. ಸದರಿ ಕಪಾಟಿನ ಚಾವಿಯನ್ನು ಒಡೆಯಲಾಗಿತ್ತೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸಹಿಯನ್ನು ಬೆಳಿಗ್ಗೆ 09-00 ರ ಸಮಯಕ್ಕೆ ಮಾಡಿರುತ್ತೇನೆ. ಚಾಸಾ-1 ನನ್ನ

ಸಂಬಂಧಿಕ ಎಂದರೆ ಸರಿ. ಆದ್ದರಿಂದ ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಛಾಯಾಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**